ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

# ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052.

ಸಂಖ್ಯೆ: ಆರ್ಎಸ್ಆರ್/205/ಎಕ್ಸ್ಎಂಸಿ/2013-14. ದಿನಾಂಕ 09 -12-2014.

## ಸ್ಪಷ್ಟೀಕರಣ

ವಿಷಯ:- ಸೌಹಾರ್ದ ಸಹಕಾರಿಗಳ ಉಪನಿಯಮಗಳ ಉದ್ದೇಶಗಳ ಬಗ್ಗೆ ಹೊರಡಿಸಿದ ಸುತ್ತೋಲೆ ಸಂ.239-ಎ ಬಗ್ಗೆ ಸ್ಪಷ್ಟೀಕರಣ.

ಉಲ್ಲೇಖ:- ಈ ಕಛೇರಿಯ ಸಮಸಂಖ್ಯೆ ಸುತ್ತೋಲೆ ದಿ: 27-10-2014.

--

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರಡಿಯಲ್ಲಿ ನೋಂದಣಿಯಾಗುವ ಸೌಹಾರ್ದ ಸಹಕಾರಿಗಳು, ಸಹಕಾರಿಗಳನ್ನು ನಾಮಾಂಕರಿಸುವ ಸಂದರ್ಭದಲ್ಲಿ ಶಿರೋನಾಮೆಯಲ್ಲಿ **'ವಿವಿಧೋದ್ದೇಶ '** ಎಂಬ ಪದವನ್ನು ಉಪಯೋಗಿಸಬಾರದು ಎಂದು ಉಲ್ಲೇಖದ ಸುತ್ತೋಲೆಯಲ್ಲಿ ತಿಳಿಸಿರುವುದನ್ನು ನೋಂದಣಿ ಪ್ರಾಧಿಕಾರಗಳು ತಪ್ಪಾಗಿ ಅರ್ಥೈಸಿಕೊಂಡು ಸೌಹಾರ್ದ ಸಹಕಾರಿಗಳನ್ನು ವಿವಿಧೋದ್ದೇಶ ಉದ್ದೇಶಕ್ಕಾಗಿ ನೋಂದಣಿ ಮಾಡದೇ ಇರುವುದು ಈ ಕಛೇರಿಯ ಗಮನಕ್ಕೆ ಬಂದಿರುತ್ತದೆ.

ಆದ್ದರಿಂದ, ಈ ಬಗ್ಗೆ ಮತ್ತೊಮ್ಮೆ ಸ್ಪಷ್ಟೀಕರಿಸುವುದೇನೆಂದರೆ **"ವಿವಿಧೋದ್ದೇಶ"** ಎಂಬ ಪದವನ್ನು ಶಿರೋನಾಮೆಯಲ್ಲಿ ಬಳಸಬಾರದೆಂದು ಮಾತ್ರ ತಿಳಿಸಿದೆ. ಸೌಹಾರ್ದ ಸಹಕಾರಿಗಳನ್ನು ನೋಂದಾಯಿಸುವ ಸಂದರ್ಭದಲ್ಲಿ ತಮ್ಮ ಉದ್ದೇಶಗಳಲ್ಲಿ **'ವಿವಿಧೋದ್ದೇಶ '** ಎಂಬ ಪದವನ್ನು ಮತ್ತು ಆ ಉದ್ದೇಶಗಳನ್ನು ಮಾಡಲು ಅವಕಾಶ ಇರುತ್ತದೆ.

ಆದ್ದರಿಂದ ಇನ್ನು ಮುಂದೆ ನೋಂದಣಿ ಸಂದರ್ಭದಲ್ಲಿ ಉದ್ದೇಶಪೂರ್ವಕವಾಗಿ ತೊಂದರೆ ನೀಡಿದಲ್ಲಿ ಅಂತಹವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು.

(ಡಾ: ಎನ್.ಎಸ್.ಚನ್ನಪ್ಪ ಗೌಡ)
ಸಹಕಾರಿಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಇವರಿಗೆ:-

1) ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು
2) ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು
3) ಎಲ್ಲಾ ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು
4) ಎಲ್ಲಾ ತಾಲ್ಲೂಕು ಸಹಕಾರ ಅಭಿವೃದ್ಧಿ ಅಧಿಕಾರಿಗಳು
5) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ನಿರ್ಮಾಣ ಭವನ, ಡಾ: ರಾಜ್‌ಕುಮಾರ್ ರಸ್ತೆ, ಬೆಂಗಳೂರು-560 010 ಇವರಿಗೆ ಮಾಹಿತಿಗಾಗಿ.
6) ಕೇಂದ್ರ ಕಛೇರಿಯ ಎಲ್ಲಾ ಕಾರ್ಯನಿರ್ವಹಣಾ ಮುಖ್ಯಸ್ಥರುಗಳಿಗೆ ಮಾಹಿತಿಗಾಗಿ.

ಯ: 9/12